ಅಸಲು ದಾವೆ ಸಂಖ್ಯೆ - 118/2010
ಡಿ.ಡಬ್ಲ್ಯೂ - 01
ದಿನಾಂಕಃ 19-12-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅಬ್ದುಲ ವಹೀದಖಾ ಅಬ್ದುಲ ಹಕೀಮಖಾನ ಬಿರಾದರರವರ ವ್ಯಾಸಂಗ ಪ್ರಮಾಣ ಪತ್ರ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಪಿ 119 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅ. ಹಕೀಮಖಾ ಸರದಾರ ಅ. ಮಜೀದಖಾಸಾ ಬಿರಾದರ ನವಾಬರವರ ವ್ಯಾಸಂಗ ಪ್ರಮಾಣ ಪತ್ರ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಪಿ 120 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅ. ರವುಫಖಾ ತಬರೇಜಖಾ ಬಿರಾದರ ನವಾಬರವರ ವ್ಯಾಸಂಗ ಪ್ರಮಾಣ ಪತ್ರ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಪಿ.121 ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ.110(ಜಿ) ಅನ್ನು ತೋರಿಸಿದ್ದು, ಅದರಲ್ಲಿ ರವುಫಖಾನರವರ ತಂದೆಯ ಹೆಸರು ತಬರೇಜಖಾನ ಬಿರಾದರ ನವಾಬ ಇರುತ್ತದೆ ಎಂದು ನಮೂದಿಸಿದ್ದಾರೆ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಸದರಿ ದಾಖಲೆಯು ಪ್ರಮಾಣಿಕೃತ ದಾಖಲೆಯು ಆಗಿರುವುದಿಲ್ಲ. ರವುಫಖಾನರವರ ತಂದೆಯ ಹೆಸರು ತಬರೇಜಖಾನ ಬಿರಾದರ ನವಾಬ ಇರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಿಪಿ.110(ಜಿ) ಯಲ್ಲಿ ನಮೂದಿಸಿದ್ದಾರೆ ಎಂದರೆ ಅದು ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ನಿಪಿ.119 ಅನ್ನು ತೋರಿಸಿದ್ದು, ಅದರಲ್ಲಿರುವ ವಿಷಯ ಸತ್ಯ ಇರುತ್ತದೆ ಎಂದು ನುಡಿಯುತ್ತಾರೆ. ಹಕೀಮಖಾನರವರ ವಂಶಾವಳಿಯ ಬಗ್ಗೆ ನಿಪಿ.110(ಸಿ) ಯಲ್ಲಿ ನಮೂದಿಸಿದ್ದಾರೆ ಎಂದರೆ ಅದು ನನಗೆ ಗೊತ್ತಿರುವುದಿಲ್ಲ ಅದು ಸುಳ್ಳು ಇರುತ್ತದೆ.

ಸಾಕ್ಷಿಗೆ ನಿಪಿ.121 ಅನ್ನು ತೋರಿಸಿದ್ದು, ಅದರಲ್ಲಿರುವ ವಿಷಯ ಸತ್ಯ ಇರುತ್ತದೆ ಎಂದು ನುಡಿಯುತ್ತಾರೆ. ರವುಫಖಾನ ತಬರೇಜಖಾನ ಬಿರಾದರ ನವಾಬರವರ ವಂಶಾವಳಿಯ ಬಗ್ಗೆ ನಿಪಿ.110(ಜಿ) ಯಲ್ಲಿ ನಮೂದಿಸಿದ್ದಾರೆ ಎಂದರೆ ಅದು ಸುಳ್ಳು ಇರುತ್ತದೆ.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅಹ್ಮದಬಿ ಗಂಡ ಕರೀಮಖಾ ಬಿರಾದರರವರ ಮರಣ ಪ್ರಮಾಣ ಪತ್ರ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಪಿ.122 ಎಂದು ಗುರುತಿಸಲಾಯಿತು.

ಗ್ರಾಮ ಲೆಕ್ಕಾಧಿಕಾರಿಗಳು ನೀಡಿದ ಬಿರಾದರ ಕುಟುಂಬದ ವಂಶಾವಳಿಯನ್ನು ನೀವು ಸುಳ್ಳು ಎಂದು ಹೇಳುತ್ತಿದ್ದು, ಸದರಿ ದಾಖಲೆಯನ್ನು ನೀವೇನಾದರು ಪ್ರಶ್ನಿಸಿದ್ದೀರಾ ಅಥವಾ ಮೇಲ್ಮನವಿಯನ್ನು ಸಲ್ಲಿಸಿದ್ದೀರಾ ಎಂದರೆ ಗ್ರಾಮ ಲೆಕ್ಕಾಧಿಕಾರಿ ನೀಡಿದ ವಂಶಾವಳಿಯನ್ನು ಸುಳ್ಳಿನಿಂದ ಕೂಡಿದ್ದರಿಂದ ನಾನು ಅದನ್ನು ಪ್ರಶ್ನಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ನಿಮ್ಮ ಪ್ರಕಾರ ವಂಶಾವಳಿಯನ್ನು ನೀಡುವ ಸಕ್ಷಮ ಪ್ರಾಧಿಕಾರ ಯಾವುದು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ, ನನಗೆ ಮಾಹಿತಿ ಇರುವುದಿಲ್ಲ. ಅಸಲು ದಾವಾ ಸಂಖ್ಯೆ 171/1984 ರಲ್ಲಿ ನೀವು ಸಲ್ಲಿಸಿದ ವಂಶಾವಳಿಯು ಯಾವುದೇ ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡು ಸಲ್ಲಿಸಿದ ವಂಶಾವಳಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ವಂಶಾವಳಿಯನ್ನು ನಾನು ನ್ಯಾಯಾಲಯದಿಂದ ಪಡೆದು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಮ್ಮ ಪ್ರಕಾರ ವಂಶಾವಳಿಯನ್ನು ನೀಡುವವರು ನ್ಯಾಯಾಲಯದವರೆ ಎಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ನೋಡಿ ಕುಲಂಕುಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಯು ಅಬ್ದುಲ ರಹೀಮಾನಖಾ ಸಾಹೇಬ ತಂದೆ ಅಬ್ದುಲ ಕರೀಮಖಾ ಸಾಹೇಬ ಬಿರಾದರ ನವಾಬ ಸಾಹೇಬರವರ ಮರಣ ಪ್ರಮಾಣ ಪತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಪಿ.123 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.